ಶ್ರೀ ಟಿ. ಆರ್. ಶಾಮಣ್ಣ :—ಶ್ರೀಮಾನ್ ಬಿ. ಟಿ. ಕಂಪಣ್ಣನವರಿಂದ ಈ ಋಣಸಿನ ಸಂಬಂಧದಲ್ಲಿ 1958ನೇ ಇಸವಿಯಿಂದ 1964 ನೇ ಇಸವಿಯವರೆಗೆ ಸುಮಾರು 2½ ಲಕ್ಷ ರೂಪಾಯಿ ಬಾಕಿ ಬರಬೇಕಾಗಿದೆ. ಇದನ್ನು ಕೊರ್ಟಿನಲ್ಲಿ ತರುವುದಕ್ಕೆ ಸರ್ಕಾರದವರು ಏತಕ್ಕೆ ಏರ್ಪಾಟು ಮಾಡಲಿಲ್ಲ ?

ಶ್ರೀ ಎಂ. ವೀರಪ್ಪಮೊಯ್ಲಿ :—ಇದರ ಸಂಬಂಧದಲ್ಲಿ ಡಿಕ್ರಿ ಆಗಿದೆ. ಕಾನೂನು ಪ್ರಕಾರ ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಆದನ್ನು ತೆಗೆದುಕೊಳ್ಳುತ್ತದೆ. ಮುಖ್ಯವಾಗಿ ಈ ವಿಚಾರ ಸುಪ್ರೀಮ್ ಕೋರ್ಟಿನಲ್ಲಿರುವ ಕಾರಣ ಯಾವ ಒಂದು ಕಾರ್ಯಕ್ರಮವನ್ನೂ ನಾವು ತೆಗೆದುಕೊಳ್ಳುವ ಹಾಗಿಲ್ಲ.

## LEAVE OF ABSENCE OF SRI F. S. TAWARE—Grant of

MADAM SPEAKER.—I have received a letter from Sri F. S. Taware, Member, Legislative Assembly requesting for leave of absence for 15 days due to ill-health from 14-2-19 5.

Is it the pleasure of the Assembly that permission be granted to Sri F. S. Taware to remain absent from 14-2-1975.

HON. MEMBERS :—Yes.

MADAM SPEAKER :—Permission to remain absent is granted.

## MOTION TO ELECT MEMBERS TO THE SENATE OF MYSORE UNIVERSITY

SRI D. DEVARAJ URS (Chief Minister) :—I beg to move :

"That this Assembly do proceed to elect Six members to the Senate of Mysore University according to the principle of proportional representation by means of single transferable vote as required Under section 15 of the Mysore University Act, 1956."

MADAM SPEAKER :—The question is :

"That this Assembly do proceed to elect Six members to the Senate of Mysore Univirsity according to the principle of proportional representation by means of single transferable vote as required Under section 15 of the Mysore University Act, 1956."

*The motion was adopted*

Calendar of events will be circulated separately.

## ALLEGED REMARKS OF THE CHIEF JUSTICE OF MYSORE ON THE LAND TRIBUNALS

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :— ಮಾನ್ಯ ಅಧ್ಯಕ್ಷಿಣಿ ಯವರೇ ನಾನು ಸಕಾಲದಲ್ಲಿ ತಮಗೆ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ನಿನ್ನೆ ದಿವಸ ಪತ್ರಿಕೆಯಲ್ಲಿ ಮುಖ್ಯವಾಗಿ ಎರಡು ವಿಷಯಗಳು ಪ್ರಕಟವಾಗಿವೆ. ಅದು ಏನೆಂದರೆ ನಮ್ಮ ರಾಜ್ಯದ ಶ್ರೇಷ್ಠ ನಾಯಾಧೀಶರು ಭೂಸೂಧಾರಣೆಯ ಕಾನನದ ಬಗ್ಗೆ ಮತ್ತು ಭೂ ನ್ಯಾಯ ಮಂಡಲಿಯ ಬಗ್ಗೆ ವಕೀಲರ ನೀತಿಯ ಬಗ್ಗೆ ಟೀಕೆ ಮಾಡಿದ್ದಾರೆ ಮತ್ತು ವ್ಯಂಗ್ಯವಾಗಿ ಈ ಸಭೆಯನ್ನು ಟೀಕೆ ಮಾಡಿದ್ದಾರೆ ಅವರ ಮಾತಿನಲ್ಲೇ ಹೇಳುವುದಾದರೆ ಭೂ ನ್ಯಾಯ ಮಂಡಳಿಯಿಂದ ವಕೀಲರನ್ನು ಬಹಿಷ್ಕರಿಸಿರುವುದು ಯಾರ ಆಲೋಚನೆ, ಯಾರ ಕಲಾಪ, ಯಾರ ಚಾತುರ್ಯ ನನಗಂತೂ ಅರ್ಥವಾಗುವುದಿಲ್ಲ ಎಂದು ನಮ್ಮ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಗೋವಿಂದ ಭಟ್ ಅವರು ವ್ಯಂಗ್ಯವಾಗಿ ಈ ಸಭೆಯನ್ನು ಟೀಕೆ ಮಾಡಿದ್ದಾರೆ.

ಅಧ್ಯಕ್ಷರು :— ತಾವು ನನಗೆ ಕಾಗದ ಬರೆದಿದ್ದೀರಿ. ಕಾಗದ ಕೊಟ್ಟ ಮಾತ್ರಕ್ಕೆ ನುಮ್ಮನೆ ಹೀಗೆ ನಿಂತುಕೊಂಡು ಹೇಳಿದರೆ ಹೇಗೆ ? ಇದಕ್ಕೆ ಯಾವ ರೂಲ್ಸ್ ಅಂಡ್ ರೆಗ್ಯುಲೇಷನ್ ಇಲ್ಲವೇ ? ತಮಗೆ ನಮ್ಮಿಂದ ಜವಾಬು ಒಂದಿಲ್ಲವೇ ? ತಾವು ಕಳುಹಿಸಿರುವ ಕಾಗದವನ್ನು ನಾವು ಎಗ್ನಾಮಿನ್ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :—ಪತ್ರಿಕೆಯಲ್ಲಿ ಬಂದಿರುವ ವಿಷಯವನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು) :—ಪತ್ರಿಕೆಯಲ್ಲಿ ಬಂದದನ್ನು ನೇರವಾಗಿ ಈ ಸಭೆಯಲ್ಲಿ ತರುವುದಕ್ಕೆ ಸಾಧ್ಯವಿದೆಯೇ ? ತಾವು ರೂಲ್ಸ್ ಓದಿ. ತಾವು ನೋಟೀಸ್ ಕಳುಹಿಸಿಕೊಟ್ಟ ಮಾತ್ರಕ್ಕೆ ಅದನ್ನು ಹೇಳುವುದಕ್ಕಾಗು